

# ಸ್ಪೇನಿನ ಸೊಬಗು ಸೆವಿಲ್

**ವಿಶ್ವದ 'ಟಾಪ್ ಟೆನ್ ಸಿಟಿ'ಗಳಲ್ಲಿ ಒಂದಾಗಿರುವ ಸೆವಿಲ್, ಪ್ರವಾಸಿಗರ ಜ್ಞಾನದಾಹವನ್ನು ತಣಿಸುವ ಅಪೂರ್ವ ನಗರ. ಹಳೆಯ ಮತ್ತು ಹೊಸ ನಾಗರಿಕತೆಗಳ ಸಂಗಮಸ್ಥಳ.**

**■ ಎಸ್.ಪಿ. ವಿಜಯಲಕ್ಷ್ಮಿ**

ನಮ್ಮಲ್ಲಿ 'ಓಲಾ' ಎನ್ನುವ ಪದ ಈಗೀಗ ಚಲಾವಣೆಯಲ್ಲಿದೆ. ಇದರರ್ಥ 'ಹಲೋ' ಎಂದು. ಜನ ಎಲ್ಲೆಲ್ಲೂ ಮುಗುಳ್ನಗುತ್ತಾ 'ಓಲಾ' ಎನ್ನುವುದನ್ನು ಸ್ಪೇನ್ ದೇಶದಲ್ಲೇ ಕೇಳಿ ಆನಂದಿಸಬೇಕು. ಹೌದು, ಓಲಾದ ತವರು ಸ್ಪೇನ್.

ಸ್ಪೇನಿನ ದಕ್ಷಿಣ ಭಾಗ 'ಅಂದಲೂಸಿಯಾ'ದ ಸೆವಿಲ್ ಪ್ರಾಂತ್ಯದ ರಾಜಧಾನಿ ಈ 'ಸೆವಿಲ್' ನಗರ. 'ಗ್ವಾದಲ್‌ಕಿವಿಯರ್' ನದಿ ದಡದಲ್ಲಿ ಅರಳಿರುವ ಈ ಸುಂದರ ನಗರ ಸ್ಪೈನಿನ ಅತ್ಯಂತ ಪ್ರಮುಖ ಮತ್ತು ನಾಲ್ಕನೇ ಅತಿದೊಡ್ಡ ನಗರ. 'ಲೋನ್‌ಲಿ ಪ್ಲಾನೆಟ್' ಸಂಸ್ಥೆ ತನ್ನ, ವಿಶ್ವದ ಹತ್ತು 'ಟಾಪ್ ಟೆನ್ ಸಿಟಿ' ಸರ್ವೆಯಲ್ಲಿ ಸೆವಿಲ್ ಅನ್ನು ಆಯ್ಕೆ ಮಾಡಿದ್ದೇ ಇದರ ಹೆಗ್ಗಳಿಕೆಗೊಂದು ಸಾಕ್ಷಿ. ಇಲ್ಲಿಯ ಹಳೆಯ ಭಾಗವೊಂದರಲ್ಲೇ 'ಯುನೆಸ್ಕೊ ಹೆರಿಟೇಜ್ ಸೈಟ್'ಗೆ ಸೇರಿದ ಮೂರು ಪ್ರಮುಖ ನಿರ್ಮಾಣಗಳಿವೆ. ರೋಮನ್ ಸಿಟಿಯಾಗಿ ಅಸ್ತಿತ್ವಕ್ಕೆ ಬಂದರೂ, 8ನೇ ಶತಮಾನದಲ್ಲಿ ಮುಸ್ಲಿಮರ ವಶವಾಗಿ, ಎಂಟು ನೂರು ವರ್ಷಗಳ ನಂತರ ಮತ್ತೆ ಕ್ರಿಶ್ಚಿಯನ್ನರ ವಶವಾದ ಈ ನಗರದ ತುಂಬ ಈ ಎರಡೂ ಧರ್ಮಗಳ ಕಲೆ, ಕಟ್ಟಡ ವಿನ್ಯಾಸ, ಸಂಸ್ಕೃತಿ, ಪರಂಪರಾಗತ ರೂಢಿ, ಕೌಶಲ್ಯಗಳು ಢಾಳಾಗಿ ಎದ್ದು ಕಾಣುತ್ತವೆ. ಕೊಲಂಬಸ್ ಅಮೆರಿಕಾ ಕಂಡುಹಿಡಿದ ಮೇಲೆ, ಸ್ಪೇನ್ ಮತ್ತು ಅಮೆರಿಕಾಗಳ ನಡುವೆ ವಾಣಿಜ್ಯ ವ್ಯಾಪಾರ ಕುದುರಿಸಲು 'ಸೆವಿಲ್ಲ'ವನ್ನೇ ಆಯ್ಕೆ ಮಾಡಿಕೊಂಡ. ಕಾರಣ, ಇದು ನದಿ ಬಂದರು ಕೂಡ ಆಗಿ ಪ್ರಮುಖ ನಗರವಾಗಿದೆ.

ಪೋರ್ಚುಗಲ್‌ನ ಲಿಸ್ಬನ್ ಸಿಟಿಯಿಂದ ಬೆಳಿಗ್ಗೆ ಹೊರಟ ನಾವು ಮಾರ್ಗ ಮಧ್ಯೆ ಸಿಗುವ 'ಫಾತಿಮಾ' ಎನ್ನುವ ಕ್ರೈಸ್ತರ ಮುಖ್ಯ ಯಾತ್ರಾ ಸ್ಥಳದ ಭೇಟಿಯ ನಂತರ, ಸ್ಪೈನಿನ 'ಸೆವಿಲ್' ನಗರ ತಲುಪಿದ್ದು ಸಂಜೆ 5 ಗಂಟೆಗೆ. ಹಾದಿಯುದ್ದದ ರಣರಣ ಬಿಸಿಲು, ಕೆಲವೆಡೆಯ ಬಂಜರುಭೂಮಿ ಬಳಲಿಸಿಬಿಟ್ಟರೂ, ಅಲ್ಲಲ್ಲಿ ಧಾರಾಳವಾಗಿ ಬೆಟ್ಟಗುಡ್ಡ ಪ್ರದೇಶ, ಆಲಿವ್‌ಮರ, ತರಹೇವಾರಿ ಬೆಳೆಗಳ ಹೊಲ ಕಣ್ಣು ತಂಪಾಗಿಸಿತ್ತು. ಇಡೀ ದಿನದ ಪ್ರಯಾಣದ ನಂತರ ಸ್ವಲ್ಪ ಹೊತ್ತು ನಮ್ಮ ಕೋಣೆಗಳಲ್ಲಿ ವಿಶ್ರಾಂತಿ. ಸಂಜೆಗೆ ಹೋಗಿದ್ದೇ ಸೆವಿಲ್‌ನ ಅತ್ಯದ್ಭುತ 'ಫ್ಲೆಮೆಂಕೊ ಡಾನ್ಸ್ ಶೋ'ಗೆ.

**ಫ್ಲೆಮೆಂಕೋ ನೃತ್ಯ:** ಈ ನೃತ್ಯಪ್ರಾಕಾರದ ತವರೇ ಸೆವಿಲ್. ಇಲ್ಲಿಯ ಜಿಪ್ಸಿ ಎನ್ನುವ ಜನಾಂಗದವರೇ ಇದರಲ್ಲಿ ಪರಿಣಿತರು. ಈ ನೃತ್ಯ ಇಲ್ಲಿಯ ಮೂಲಜನಾಂಗ 'ಅಂದಲೂಸಿಯನ್ನರ' ಪುರಾತನ ಸಾಂಸ್ಕೃತಿಕ ಆಚರಣೆಯಾಗಿದ್ದು, ಇಂದು ಸ್ಪೈನಿನ ರಾಷ್ಟ್ರೀಯ ಸಾಂಸ್ಕೃತಿಕ ಹೆಮ್ಮೆಯ ಚಿಹ್ನೆಯಾಗಿದೆ. ಸೆವಿಲ್‌ನಲ್ಲಿ ಈ ನೃತ್ಯ ಬಹಳ ಮುಂಚೂಣಿಯಲ್ಲಿದ್ದು, ವಿಶ್ವದ ಪ್ರವಾಸಿಗರು ಮುಗಿಬಿದ್ದು ನೋಡುವುದರಿಂದ, ಇದು ಇಲ್ಲಿಯ ಆದಾಯದ ಬಹುಮುಖ್ಯ ಮೂಲವಾಗಿದೆ.

ಇಲ್ಲಿ ನಾವು ಟಿಕೆಟ್ ಕೊಂಡದ್ದು ಒಂದು ಗಂಟೆಯ ಕಾಲದ ಪ್ರದರ್ಶನಕ್ಕೆ. ಕರಾರುವಾಕ್ಕಾಗಿ ಅಷ್ಟೇ ಕೊಡೋದು ಎಲ್ಲ ಬಿಜಿನೆಸ್ ಲೆಕ್ಕಾಚಾರ. ಆದ್ರೆ, ನಮಗೆ ಮಾತ್ರ ಸಿಕ್ಕಾಪಟ್ಟೆ ಬೋನಸ್ ಸಿಕ್ಕಿತು. ಕಾರಣ, ನಮ್ಮ ಪ್ರವಾಸೀ ತಂಡದಲ್ಲಿ ಬಾಲಿವುಡ್ ಡೈರೆಕ್ಟರ್, 'ಪುನೀತ್ ಇಸ್ಸಾರ್' ಇದ್ದಿದ್ದರಿಂದ. ಬಹಳ ಹಿಂದೆ ಮಹಾಭಾರತ ಸೀರಿಯಲ್‌ನಲ್ಲಿ

